ಶ್ರೀ ಹಂಜೀಶಿವಣ್ಣ.—ಅಲ್ಲರುವ ಸಬ್‌ಇನ್ಸ್‌ಪೆಕ್ಟರ್ ಬಗ್ಗೆ ಜನರಿಂದ ದೂರುಗಳು ಬಂದಿಲ್ಲವೆ ಮತ್ತು ಆ ಸಬ್ ಇನ್ಸ್‌ಪೆಕ್ಟರ್ ಬಹಳ ದಿವಸಗಳಿಂದ ಅಲ್ಲಿಯೇ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ದೂರಿನ ವಿಚಾರ ನನಗೆ ಗೊತ್ತಿಲ್ಲ. ಮತ್ತು ಎಷ್ಟು ದಿವಸ ಗಳಿಂದ ಆತ ಅಲ್ಲಿ ಇದ್ದಾನೆ ಎಂಬುದು ಸಹ ನನಗೆ ಗೊತ್ತಿಲ್ಲ. ಈ ಪ್ರಕರಣ ಏತಕ್ಕೆ ನಡೆದಿದೆ ಎಂಬುದು ಮಾನ್ಯ ಸದಸ್ಯರಿಗೂ ಕೂಡ ಗೊತ್ತಿದೆ. ವಿವರಗಳನ್ನು ಹೇಳುವುದಕ್ಕೆ ನಾನು ಇಷ್ಟ ಪಡುವುದಿಲ್ಲ. ಶ್ರೀ ಬಿ. ಎಂ. ನಂಜುಂಡಪ್ಪ ಎಂಬುವರ ಮನೆಯಲ್ಲಿ ಕಳ್ಳತನದ ಸಾಮಾನುಗಳು ಇದ್ದ ವಿಚಾರ ಗೊತ್ತಾದಾಗ ಅವರನ್ನು ಅರೆಸ್ಟ್ ಮಾಡಲಾಯಿತು. ಅವರನ್ನು ಪೋಲೀಸ್ ಕಛೇರಿಗೆ ಕರೆದುಕೊಂಡು ಬಂದಾಗ ಸ್ವಲ್ಪ ಗಲಾಟೆ ನಡೆಯಿತು ಮತ್ತು ಅವರಿಗೆ ಸ್ವಲ್ಪ ಗಾಯಗಳು ಆಗಿವೆ ಎಂದು ವರದಿಯಲ್ಲಿ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಪೋಲೀಸು ಸ್ಟೇಷನ್ನಿಗೆ ಯಾರಾದರೂ ದೂರುಗಳನ್ನು ಕೊಡಲು ಪೋಲೀಸು ಸ್ಟೇಷನ್ನಿಗೆ ಹೋದರೆ ಅಲ್ಲರುವ ಪೋಲೀಸು ಅಧಿಕಾರಿಗಳು ಸೌಜನ್ಯದಿಂದ ವರ್ತಿಸುತ್ತಿಲ್ಲ. ಇದರ ಬಗ್ಗೆ ಸರಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ ?

ಶ್ರೀ ವೀರೇಂದ್ರ ಪಾಟೀಲ್.—ಇದು ಜನರಲ್ ಪ್ರಶ್ನೆಯಾಯಿತು. ಪೋಲೀಸಿನವರು ಸರಿಯಾಗಿ ವರ್ತಿಸಬೇಕು ಮತ್ತು ಎಲ್ಲಾ ಸೌಕರ್ಯಗಳನ್ನೂ ಜನರಿಗೆ ಕೊಡಬೇಕು ಎಂದು ಸರಕಾರ ಸೂಚನೆ ಗಳನ್ನು ನೀಡಿದೆ. ಆದರೆ ಇಲ್ಲರುವ ವಿಚಾರ ಯಾರೋ ಕಳ್ಳ ಮಾಲುಗಳನ್ನು ಖರೀದಿ ಮಾಡಿದ್ದರು. ಇವರನ್ನು ಇಂಟರಾಗೇಟ್ ಮಾಡಲು ಕಳಿಸಿದ್ದರು. ಇದರ ಬಗ್ಗೆ ಇನ್ನೂ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ಆದರೆ ಇದರಲ್ಲಿ ಇಂಟರಾಗೇಟ್ ಮಾಡುವಾಗ ಪೋಲೀಸಿನವರಮೇಲೆ ಇವರ ಸುತ್ತಮುತ್ತಲಿನ ಜನ ಬಂದು ಗಲಾಟೆ ಮಾಡಲು ಆರಂಭ ಮಾಡಿದರು. ಇದರಿಂದ ಇಲ್ಲೆ ಈ ರೀತಿ ಆಯಿತು. ಆವರೆ ಇಲ್ಲಿ ಅನಾವಶ್ಯಕವಾದ ಗದ್ದಲವನ್ನು ಎಬ್ಬಿಸಿದರು ಎಂದು ತಿಳಿದಿದೆ. ಇದರ ಬಗ್ಗೆ ಪೋಲಿಸಿನವರು ಪರಿಶೀಲನೆ ಮಾಡುತ್ತಿದ್ದಾರೆ. ಇದಕ್ಕೆ ಕಾರಣವೇನು ಎನ್ನುವ ವಿವರ ಗಳನ್ನೆಲ್ಲಾ ಇನ್ನೂ ಇನ್‌ಸ್ಟಿಗೇಷನ್ ಮುಗಿದಮೇಲೆ ಗೊತ್ತಾಗುತ್ತದೆ.

(*At this stage Sri Vatal Nagaraj entered the House and resumed his seat*).

Mr. SPEAKER.—Since Sri Vatal Nagaraj was directed to withdraw from the House under Rule 308, he cannot participate. If he expresses unconditional regret, I will permit him to sit.

ಶ್ರೀ ವಾಟಾಳ್ ನಾಗರಾಜ್.—ತಮಗೆ ನಾನು ಅವಮಾನಮಾಡಬೇಕು ಎನ್ನುವುದು ನನ್ನ ಉದ್ದೇಶವಲ್ಲ. ನನ್ನ ಮೇಲೆ ಏಕೆ ಹೀಗೆ ಕೋಪ ಮಾಡಿಕೊಳ್ಳುತ್ತೀರಿ ?

ಅಧ್ಯಕ್ಷರು.—ಭಾಷಣ ಮಾಡುವುದಕ್ಕೆ ಇದು ಸಮಯವಲ್ಲ.

ಶ್ರೀ ವಾಟಾಳ್ ನಾಗರಾಜ್.—ತಪ್ಪಾಗಿದ್ದರೆ ತಪ್ಪಾಯಿತು ಎಂದು ಹೇಳಿಬಿಡುತ್ತೇನೆ.

Mr. SPEAKER.—Question Hour is over.

QUESTIONS FOR ANSWERS ON THE DAY

(but not taken up)

Foundation Stone of the Kamalashile Bridge

218. Sri SUBBA RAO HALSNAD (Byndoor).—

Will the Minister for Public Works be pleased to state:—

(*a*) whether any complaints regarding the unfair acts and malpractices of a contractor who was entrusted with the work of

filling concrete to the foundation of the Kamalashile bridge have been received on 4th April 1968 ;

(*b*) if so, the action taken by Government in that behalf ;

(*c*) whether any experts were sent to examine the concrete, if so, what did Government find out in their report ;

(*d*) whether Government intend to have the concrete now examined as the construction work of Upper portion of the bridge has started as the malpractices are still continuing there ?

Sri K. LAKKAPPA (Minister for Public Works).—

(*a*) Yes.

(*b*) The matter was got investigated by the Department.

(*c*) This Superintending Engineer and the Executive Engineer have examined the work. The report furnished by them reveals that there is no ground to suspect that inferior quality of concrete has been used or sub-standard work has been executed by the contractor.

(*d*) No.

Paddy procured and distributed in Raichur District

219. Sri SADASHIVAPPA PATIL (Deodurg).—

Will the Minister of State for Food and Civil Supplies be pleased to state:--

(*a*) the total quantity (in terms of quintals) of paddy collected as levy in Raichur District since the introduction of levy system up to a latest convenient date ;

(*b*) the total quantity of paddy (in terms of quintals) distributed in the district and outside during the period mentioned in clause (*a*) ?

Sri B. VITHALDAS SHETTY (Minister of State for Food and Civil Supplies).—

(*a*) 3,30,229-93 quintals of paddy has been procured up to 10th August 1969 since 1965-66. The details are furnished in the statement appended ;

(*b*) 81,537 quintals of paddy has been distributed in the District and 1,96,878 quintals of paddy has been moved to other Districts during the above period.